ಹೆದ್ದಾರಿಯ ಇಕ್ಕೆಡೆಗಳಲ್ಲಿ ಕ್ಷಣಾರ್ಧದಲ್ಲಿ ಕೀಟ ಕೊಲ್ಲುವ ನಾಶಕಗಳ ಭಾರೀ ಜಾಹೀರಾತುಗಳು ಕಣ್ಣಿಗೆ ರಾಚುತ್ತವೆ. ಹೆದ್ದಾರಿಯಲ್ಲಿ ಹಾದು ಹೋಗುವಾಗ ಮೂಗಿಗೆ ಅಡರುವ ವಿಷದ ವಾಸನೆ ಒಂದೆಡೆಯಾದರೆ ಕೈಯಾರೆ ವಿಷವನ್ನು ಗದ್ದೆ, ಕೃಷಿಗೆ ಸಿಂಪಡಿಸುವ ರೈತರು ಅಲ್ಲಲ್ಲಿ ಅಡ್ಡವಾಗುತ್ತಾರೆ. ಅಲ್ಲಿಯ ರೈತರ ಪ್ರಕಾರ ವಿಷದ ಎಣ್ಣೆ (ಎಣ್ಣಿ) ಉಳುಮೆಯಷ್ಟೇ ಅನಿವಾರ್ಯ. ಅವುಗಳನ್ನು ಗದ್ದೆಗೆ ಸಿಂಪಡಿಸುವಾಗ ಯಾವ ಪರಿಯಾದ ರಕ್ಷಣಾ ಕವಚವೂ ಇಲ್ಲ. ಎಲ್ಲವೂ ಎಕರೆ, ಹೆಕ್ಟೇರ್, ಲೀಟರ್, ಕ್ವಿಂಟಾಲ್, ಮಾನಗಳು. 'ತಲೆನೋವಿಗೆ ಮಾತ್ರೆ ಕೊಡಿ' ಎಂಬಷ್ಟೇ ಸರಳವಾಗಿ ಅವರು ಚೀಲದ ತುಂಬಾ ವಿಷ ತರಬಲ್ಲರು. ತಂದದ್ದನ್ನು ಹಾಗೆಯೇ ನೇರವಾಗಿ ನೀರಿಗೆ ಬೆರೆಸಿ ಹೊಡೆಯುವುದೇ. ಕೈಕವಚ, ಬಾಯಿ ಮುಚ್ಚುಗೆ, ಗಾಳಿ ಬೀಸುವ ದಿಕ್ಕು, ಪ್ರಥಮ ಚಿಕಿತ್ಸೆಯ ಯಾವ ಸಾಧನಗಳೂ ಇಲ್ಲ. ವಿಷದ ಬಾಟಲಿಗೆ ಅಂಟಿಕೊಂಡೇ ಬರುವ ಮಾಹಿತಿ ಪತ್ರವನ್ನು ಓದುವ ಕ್ರಮವೇ ಇಲ್ಲ. ಬಹಳಷ್ಟು ಸೂಚನಾಪತ್ರಗಳು ಓದುವಂತೆ ಇರುವುದಿಲ್ಲ. ಸಹಜ ಓದಿಗೆ ಕಷ್ಟವಾಗುವ ಚಿಕ್ಕ ಅಕ್ಷರಗಳು. ಅದೇ ಕಾಗದದಲ್ಲಿ ಗದ್ದೆ–ಹೊಲದ ಬದುವಿನಲ್ಲಿ ಕೂತು ತಿಂಡಿ ತಿನ್ನುವವರೂ ಇದ್ದಾರೆ.

ಗದ್ದೆ–ಹೊಲಗಳ ಬದಿಯಲ್ಲಿ ವಿಷ ಸಿಂಪಡಿಸುವ ರೈತರನ್ನು ಮಾತನಾಡಿಸಿ ನೋಡಿ. ಶೇ. 99 ಮಂದಿಗೆ ತಾವು ಕೈಯಾರೆ ತಂದ ಕೀಟನಾಶಕವನ್ನು ಎಷ್ಟು ನೀರಿಗೆ ಎಷ್ಟು ವಿಷ ಸೇರಿಸಬೇಕೆಂಬ ಸಮಪಾತ ಗೊತ್ತಿಲ್ಲ. ಎಲ್ಲರ ಅವಸರ ಒಂದೇ. ಹೆಚ್ಚು ವಿಷ ಸೇರಿಸಿದರೆ ಕೀಟಗಳು ಬೇಗ ಬೇಗ ಸಾಯುತ್ತವೆ ಮತ್ತು ಬಿತ್ತಿ, ನೆಟ್ಟು ಕೊಯ್ಯುವವರೆಗೆ ವಿಷ ಹೊಡೆಯುತ್ತಲೇ ಇರಬೇಕು ಎನ್ನುವುದು. ರಸಗೊಬ್ಬರ, ಕೀಟನಾಶಕಗಳಿಗೆ ಯಾವುದೇ ಪರ್ಯಾಯಗಳಿಲ್ಲ ಎಂದೇ ನಂಬಿರುವ ಇವರೆಲ್ಲ ಬೀಜ ತರುವಾಗಲೇ ಅದೇ ಅಂಗಡಿಯಿಂದ ವಿಷವನ್ನೂ ತರುತ್ತಾರೆ. ಬೀಜ–ಬೆಳೆ ಒಂದೇ. ಆದರೆ ವರ್ಷದಿಂದ ವರ್ಷಕ್ಕೆ ಅದನ್ನು ಸಿಂಪಡಿಸುವ ವಿಷಗಳು ಹೊಸದಾಗಿ ಹುಟ್ಟುತ್ತವೆ. ಬೀಜ ಬಿತ್ತದ, ಕೃಷಿ ಮಾಡದ, ಭೂಮಿಯ ಮೇಲೆ ಅಂಗೈಯಗಲ ಸ್ವಂತ ಜಮೀನು ಇಲ್ಲದವರೆಲ್ಲಾ ರಾಸಾಯನಿಕಗಳ ಅಂಗಡಿ ಇಟ್ಟುಕೊಂಡು ಸಿಂಪಡಣೆ, ಶೋಷಣೆ ರಕ್ಷಣೆಯ ವಿಷಯದಲ್ಲಿ ರೈತರಿಗೆ ಮಾರ್ಗದರ್ಶನ ಮಾಡುತ್ತಾರೆ.

ಹಸಿರುಮನೆ, ಕೃಷಿ ಚಟುವಟಿಕೆಗಳು, ಅಂಗಾಂಗ ಕೃಷಿ, ಹೈಬ್ರೀಡ್ ಕೃಷಿ, ಹೈಡ್ರೋಪೋನಿಕ್

## ಹೆಚ್ಚು ವಿಷ ಕುಡಿಯುವ ಕೀಟಗಳು

ಒಂದು ಕಡೆ ವಿಷ ಬಳಸದೆ, ರಾಸಾಯನಿಕ ಒಳಸುಳಿಗಳಿಲ್ಲದೆ ಯಾವುದನ್ನೂ ಬೆಳೆಸಲು ಸಾಧ್ಯವೇ ಇಲ್ಲ ಎನ್ನುವ ರೈತ, ಇನ್ನೊಂದೆಡೆ ರೈತ ಕೊಡುವುದನ್ನೆಲ್ಲಾ ಪರೀಕ್ಷಿಸದೆ, ಪ್ರಶ್ನಿಸದೆ ಹಾಗೆಯೇ ಬಳಸುವ, ಖರೀದಿಸುವ ಬಳಕೆದಾರ, ಪರಿಣಾಮ ಇಡೀ ಜಗತ್ತಿನಲ್ಲೇ ವಿಷ ಬಳಕೆಯಲ್ಲಿ ನಾವು ಎರಡನೆಯ ಸ್ಥಾನಕ್ಕೆ ಏರಿದ್ದೇವೆ.

ದುರಂತ ಅಂದರೆ ಇದೇ ಗೊಬ್ಬರ, ಕೀಟನಾಶಕಗಳನ್ನು ಸೃಷ್ಟಿಸುವ ಕಾರ್ಖಾನೆಗಳಲ್ಲಿ, ಮಾರುವ ಅಂಗಡಿಗಳಲ್ಲಿ ಕೆಲಸ ಮಾಡುವ ಬಹುಪಾಲು ಯುವಕರು ಈ ದೇಶದ ರೈತರ ಮಕ್ಕಳೇ. ಅಗ್ರಿಕಲ್ಚರ್ ವಿ.ವಿ.ಯಲ್ಲಿ ಪದವಿ ಪಡೆದವರು. ಪದವಿಗೆ ಮುಂಚೆ ತಂದೆ ತಾಯಿಯವರಿಗೆ 'ಹೊಲಗದ್ದೆಗಳಿಗೆ ಮರಳಿ ಬರುತ್ತೇವೆ' ಎಂದೇ ಹೋದವರು. ಈಗ ಇವರೆಲ್ಲಾ ತಜ್ಞರಾಗಿದ್ದಾರೆ. ಮ್ಯಾನೇಜರ್, ಏಜೆಂಟರಾಗಿದ್ದಾರೆ. ಮಾನ್ವಿಯಲ್ಲಿ ಕೀಟನಾಶಕಗಳನ್ನು ಮಾರುವ ಬಸವರಾಜು ಹೇಳುತ್ತಾರೆ: 'ನಾನು ಇದೇ ಸಂಸ್ಥೆಯಲ್ಲಿ ಉಳಿಯಬೇಕಾದರೆ, ನಿಗದಿತ ವೇತನ ಪಡೆಯಬೇಕಾದರೆ ಮಾಸಿಕ ಇಂತಿಷ್ಟು ಗೊಬ್ಬರ, ಕೀಟನಾಶಕ ಮಾರಲೇಬೇಕು. ಸಂಸ್ಥೆ ನನಗೆ ಓಡಾಡಲು ಜೀಪು ಕೊಟ್ಟಿದೆ. ಮನೆ ಬಾಡಿಗೆ ಕೊಡುತ್ತಿದೆ. ವಿಷ ಬಳಕೆ ಕಡಿಮೆ ಮಾಡಿ ಎಂದು ನಾನು ಹೇಗೆ ಹೇಳಲಿ?' ಎನ್ನುತ್ತಾರೆ.

ಮಾರುವವರು ನಾವೇ, ಸೃಷ್ಟಿಸುವವರು ನಾವೇ. ಈಗ ಅದರ ಪ್ರತಿಫಲ ತಿನ್ನುವವರೂ ನಾವೇ ಅಲ್ಲವೇ ಎಂಬ ಮಾತಿಗೆ ಬಸವರಾಜು ಕೊಡುವ ಉತ್ತರ: 'ಈಗೀಗ ಕೀಟಗಳು ಹೆಚ್ಚು ವಿಷ ಕುಡಿಯುತ್ತವೆ. ಐದು ದಿನಗಳಿಗೊಮ್ಮೆ ಸಿಂಪಡಿಸಿದರೂ ಸಾಯೋಲ್ಲ. ನಾವೂ ಕೂಡಾ ಹಾಗೆಯೇ ಎಂದು ತಿಳಿಯುವ!'. ಎಲ್ಲಿಯವರೆಗೆ ನಾವು ಹಣದ ಹಿಂದೆ ಹೋಗುವುದನ್ನು ಬಿಟ್ಟು ಶುದ್ಧ ಅನ್ನ, ನೀರು, ಗಾಳಿಯ ಹಿಂದೆ ಬರುವುದಿಲ್ಲವೋ ಅಲ್ಲಿಯವರೆಗೆ ದೇಹ ಮತ್ತು ಮನಸ್ಸು ನೆಮ್ಮದಿಯಲ್ಲಿರುವುದಿಲ್ಲ.

ನೂರಕ್ಕೆ ನೂರರಷ್ಟು ರೈತ ಸಾವಯುವದಲ್ಲೇ ಬೆಳೆದ ಬೆಳೆ ಮಾರುಕಟ್ಟೆಗೆ ಹೋಗುವಾಗ ವಿಷದಲ್ಲಿ ಮಿಂದೆದ್ದು ಹೋಗುವ ಸಾಧ್ಯತೆಯೂ ತುಂಬಾ ಇದೆ. ಭಾರತದಲ್ಲಿ ಶೇ. 80ರಷ್ಟು ರೈತರು ಇಂದಿಗೂ ತಮ್ಮ ಬೆಳೆಯನ್ನು ಬಹುಕಾಲದವರೆಗೆ ಉಳಿಸುವ ತಾಂತ್ರಿಕತೆಯನ್ನು, ಗೋದಾಮುಗಳನ್ನು ಒಳಗೊಂಡಿಲ್ಲ. ತರಕಾರಿಯಲ್ಲಂತೂ ಇಲ್ಲವೇ ಇಲ್ಲ. ಬಹುಪಾಲು ಇವು ಉಳಿಯುವುದು ಮಾರಾಟಗಾರರ ಕೈಯಲ್ಲಿ. ಆಗ ಅವುಗಳ ಬಣ್ಣ, ರೂಪ, ಗಾತ್ರವನ್ನು ಮತ್ತಷ್ಟು ಆಕರ್ಷಿಸುವಂತೆ ಮಾಡುವ, ಬೆಲೆ ವೃದ್ಧಿಸುವ, ಲಾಭ ಗಿಟ್ಟಿಸುವ ವಿಧಾನಗಳಲ್ಲಿ ವಿಷ ಚೋದಕಗಳು ಗರಿಷ್ಠ ಪ್ರಮಾಣದಲ್ಲಿ ಬಳಕೆಯಾಗುತ್ತದೆ. ರೈತ ಮಣ್ಣಿನ, ಬೇವಿನ, ಚಿಗುರಿನ ದಾರಿಯಲ್ಲಿ ನೀಡಿದರೆ ಮಾರಾಟಗಾರ, ಮಧ್ಯವರ್ತಿ ನೇರವಾಗಿಯೇ ಅನ್ನ, ಆಹಾರದ ಮೇಲೆ ವಿಷ ಸುರಿಯುತ್ತಾನೆ.


ಆರೋಗ್ಯಕರವಾದ
ಸವಿಯನ್ನು ಆನಂದಿಸಿ
Along with HERBS
100% NATURAL
ARECA TEA
HEALTHY • TASTY • REFRESHING
ಇತರ ಚಹಾಗಳಿಗಿಂತ ಹೆಚ್ಚಿನ ಆ್ಯಂಟಿಆಕ್ಸಿಡೆಂಟ್ ಗುಣಗಳನ್ನು ಹೊಂದಿದೆ.
ಮಧುಮೇಹ ನಿರ್ವಹಣೆಯಲ್ಲಿ ಸಾಬೀತಾಗಿದೆ.
ಕೊಲೆಸ್ಟರಾಲ್ ಅನ್ನು ಪರಿಣಾಮಕಾರಿಯಾಗಿ ನಿರ್ವಹಿಸುತ್ತದೆ.
ಶಕ್ತಿಯನ್ನು ಹೆಚ್ಚಿಸುತ್ತದೆ.
ಒತ್ತಡವನ್ನು ನಿವಾರಿಸುತ್ತದೆ.
ದೀರ್ಘಕಾಲೀನ ಬಳಕೆಯಲ್ಲಿ ಸುರಕ್ಷಿತ.
ಅರೆಕಾ ಟೀ ಒಂದು ಉತ್ತಮ ಆಯ್ಕೆ

ಆರೋಗ್ಯಕರ • ರುಚಿಕರ • ಉಲ್ಲಾಸಕರ
5 ರುಚಿಕರ ಸ್ವಾದಗಳಲ್ಲಿ ಲಭ್ಯ
ಪುದೀನ, ಶುಂಠಿ, ರೆಗ್ಯುಲರ್,
ನಿಂಬೆ ಮತ್ತು ತುಳಸಿ

WORLD'S FIRST ARECA TEA
INNOVATIVE PRODUCT OF THE YEAR 2015 MAKE IN INDIA EXCELLENCE AWARD
ENTREPRENEURIAL INNOVATION 2017
BEST AGRO FOOD STARTUP 2018
ಪ್ರಮೋಟರ್ಸ್: ಗ್ರೀನ್ ರೆಮೆಡೀಸ್, ಉಡುಪಿ
+91 820 252 9023
ಕಸ್ಟಮರ್ ಕೇರ್ ನಂ:
+91 80 2672 6337 / +91 63610 08174
ಇ ಮೇಲ್: info@arecatea.in
ಆನ್‌ಲೈನ್ ನಲ್ಲಿ ಖರೀದಿಸಿ
amazon
bigbasket
Flipkart
www.arecatea.in ನಲ್ಲೂ ಲಭ್ಯ